ದಾವಣಗೆರೆ ವಿಶ್ವವಿದ್ಯಾನಿಲಯ
DAVANGERE UNIVERSITY

ಕುಲಸಚಿವ (ಪರೀಕ್ಷಾಂಗ) ರವರ ಕಚೇರಿ,
ಶಿವಗಂಗೋತ್ರಿ, ದಾವಣಗೆರೆ-577007.
ದೂರವಾಣಿ ಸಂಖ್ಯೆ: 08192-208420/208104.

Office of the Registrar (Evaluation),
Shivagangothri, Davanagere -577007.
Phone No. 08192-208420/208104.

**Email**: examination@davangereuniversity.ac.in

**ಸಂಖ್ಯೆ:ದಾವಿ:ಪವಿ:ಆಶಾ:156/2026-27/22** **ದಿನಾಂಕ:14.08.2026**

# -: ಸುತ್ತೋಲೆ :-

ವಿಷಯ : CCTV ಕಣ್ಗಾವಲು ಸ್ಥಾಪನೆ ಮತ್ತು ದೃಶ್ಯಗಳ ಧಾರಣ ಕುರಿತು.
ಉಲ್ಲೇಖ : ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:03.08.2026

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಳೆದ ಶೈಕ್ಷಣಿಕ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಗಳು ಪರಿಶೀಲನೆ ಸಮಯದಲ್ಲಿ, ಕಾಲೇಜುಗಳಲ್ಲಿ CCTV ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳುವ ಷರತ್ತಿನ ಮೇರೆಗೆ, ಸಮಿತಿಗಳು ಕಾಲೇಜಿನ ಮುಂದುವರಿಕೆ ಸಂಯೋಜನೆಗೆ ಶಿಫಾರಸ್ಸು ಮಾಡಲಾಗಿದೆ. ಆದರೆ ಹಲವಾರು ಕಾಲೇಜುಗಳಲ್ಲಿ ಇದುವರೆವಿಗೂ CCTV ಗಳನ್ನು ಅಳವಡಿಸಿಲ್ಲದೇ ಇರುವುದು ಕಂಡು ಬಂದಿರುತ್ತದೆ ಹಾಗೂ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ನಡೆದಿರುವ ಸ್ನಾತಕ / ಸ್ನಾತಕೋತ್ತರ ಪದವಿ ಪರೀಕ್ಷಾ ಪ್ರಕ್ರಿಯೆಯ ನ್ಯೂನತೆಗಳ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಅನೇಕ ದೂರುಗಳು ಬಂದಿರುತ್ತವೆ.

ಆದುದರಿಂದ, ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳ ದೃಶ್ಯಾವಳಿಗಳನ್ನು ಆನ್‌ಲೈನ್ ಮೂಲಕ ವೀಕ್ಷಣೆ/ CCTV ಕಣ್ಗಾವಲಿನಲ್ಲಿ ನಡೆಸುವ ಸಂಬಂಧ, ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಅನ್ವಯವಾಗುವಂತೆ, (ಡಿಸಂಬರ್ 2026-ಜನವರಿ 2027ರಿಂದ ಹಾಗೂ ನಂತರ ನಡೆಯಲಿರುವ) ಎಲ್ಲಾ ಪರೀಕ್ಷಾ ಕೇಂದ್ರಗಳು/ಕಾಲೇಜುಗಳ ಬೋಧನಾ ಕೊಠಡಿಗಳು/ಪರೀಕ್ಷೆ ನಡೆಯುವ ಕೊಠಡಿಗಳು ಮತ್ತು ಪರೀಕ್ಷಾ ಅಧೀಕ್ಷಕರ ಕೊಠಡಿಗಳಲ್ಲಿ CCTV (ಕಣ್ಗಾವಲು) ಕ್ಯಾಮೆರಾ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಕಾಲೇಜುಗಳಲ್ಲಿ CCTV (ಕಣ್ಗಾವಲು) ಕ್ಯಾಮೆರಾಗಳನ್ನು ಅಳವಡಿಸಲಾದ (Installation) ವಿವರ ಮಾಹಿತಿಗಳನ್ನು ದಿನಾಂಕ:15.09.2026ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.

**CCTV (ಕಣ್ಗಾವಲು) ಕ್ಯಾಮೆರಾಗಳನ್ನು ಅಳವಡಿಸುವಾಗ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.**

1. ಪ್ರಶ್ನೆ ಪತ್ರಿಕೆ ಭದ್ರತಾ ಕೊಠಡಿ (Strong Room) ಹಾಗೂ ಪ್ರಾಂಶುಪಾಲರ ಕೊಠಡಿಗೆ ಒಂದೇ ಪ್ರವೇಶ ದ್ವಾರವಿರಬೇಕು ಮತ್ತು ಸದಾ ಸಿ.ಸಿ.ಟಿ.ವಿ. ಕಣ್ಗಾವಲಿನಲ್ಲಿ ಕಡ್ಡಾಯವಾಗಿ ಇರತಕ್ಕದ್ದು.
2. ಪರೀಕ್ಷಾ ಬ್ಲಾಕ್‌ಗಳು, ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಮಾಡುವ ಪ್ರದೇಶ, ಭದ್ರತಾ ಕೊಠಡಿ, ಬೋಧನಾ ಕೊಠಡಿಗಳು, ಪ್ರಯೋಗಾಲಯಗಳು, ಕಾಲೇಜು ಕಟ್ಟಡದ ಮುಖ್ಯ ದ್ವಾರ ಮತ್ತು ಪರೀಕ್ಷಾ ಚಟುವಟಿಕೆಗಳನ್ನು ಒಳಗೊಳ್ಳಲು ಅಗತ್ಯವಿರುವ ಇತರೆ ಸ್ಥಳಗಳು ಸಿ.ಸಿ.ಟಿ.ವಿ. ಕ್ಯಾಮೆರಾಗಳ ಕಣ್ಗಾವಲಿನಲ್ಲಿ ಇರತಕ್ಕದ್ದು.
3. ಸಿ.ಸಿ.ಟಿ.ವಿ ಫೂಟೇಜ್‌ಗಳನ್ನು ಕನಿಷ್ಠ ಆರು ತಿಂಗಳ ಕಾಲ ಬಾಹ್ಯ ಸಂಗ್ರಹಣೆಯ ರೂಪದಲ್ಲಿ ನಿರ್ವಹಿಸಬೇಕು/ಸಂರಕ್ಷಿಸಬೇಕು.

4. CCTV Camera ಗಳ Footage ಗಳನ್ನು ವಿಶ್ವವಿದ್ಯಾನಿಲಯವು ಕೇಳಿದಾಗ ಪರೀಕ್ಷಾ ವಿಭಾಗಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಪರೀಕ್ಷಾ ಕೇಂದ್ರಗಳಲ್ಲಿ ಮತ್ತು ಕಾಲೇಜುಗಳಲ್ಲಿ ಈ ಮೇಲ್ಕಂಡ ನಿರ್ದೇಶನಗಳನ್ನು ಚಾಚು ತಪ್ಪದೇ ಪಾಲಿಸತಕ್ಕದ್ದು. ಒಂದು ವೇಳೆ ಪಾಲಿಸದೇ ಇದ್ದಲ್ಲಿ, ಅಂತಹ ಕಾಲೇಜುಗಳ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಲಾಗುವುದೆಂದು ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

ಆದೇಶಾನುಸಾರ

ಕುಲಸಚಿವರು (ಪರೀಕ್ಷಾಂಗ)
ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577007

ಗೆ
ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಸಂಯೋಜನಾಧಿಕಾರಿಗಳು ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿ:
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560 001
3. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಇಲಾಖೆ, ಮತ್ತೂರು ರಸ್ತೆ, ವಿದ್ಯಾನಗರ, ಶಿವಮೊಗ್ಗ–577 203
4. ಆಪ್ತ ಕಾರ್ಯಾಲಯ, ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ
6. ಕಛೇರಿ ಪ್ರತಿ